ಜನಾಂಗದರು ಹೆಚ್ಚಾಗಿ ಈ ಬೆಳ್ಳಿ ಆಭರಣಗಳನ್ನು ಧರಿಸುತ್ತಿದ್ದರು. ಹಳೆಯ ಬೆಳ್ಳಿ ಆಭರಣಗಳನ್ನು ಕರಗಿಸಿ ಹೊಸ ವಿನ್ಯಾಸದ ಆಭರಣಗಳನ್ನು ಮಾಡುತ್ತಿರುವುದು ಇಂದು ನಿನ್ನೆಯ ಕಥೆಯಲ್ಲ. ಮೊದಲಿನಿಂದಲೂ ಇದು ರೂಢಿಯಲ್ಲಿದ್ದಿತ್ತು. ಆದರೆ ಇತ್ತೀಚೆಗೆ ಈ ಟ್ರೆಂಡ್ ಬದಲಾಗಿದೆ. ಹಳೆಯ ಸಿಲ್ವರ್ ಆಭರಣಗಳಿಗೆ ಈಗ ಬೇಡಿಕೆ ಹೆಚ್ಚಿದೆ. ಜತೆಗೆ ಇದು ಟ್ರೆಂಡ್ ಕೂಡ ಆಗಿದೆ. ಚಿನ್ನದ ಜುಮ್ಕಾಗಳಿಗಿಂತ ಈಗಿನವರು ಸಿಲ್ವರ್, ಮೆಟಲ್ ಜುಮ್ಕಾಗಳನ್ನೇ ಇಷ್ಟಪಡುತ್ತಾರೆ. ಮೊದಲೆಲ್ಲಾ ಸೀರೆ ತೊಟ್ಟಾಗ ಜುಮ್ಕಾ ಧರಿಸುತ್ತಿದ್ದವರು ಈಗ ಜೀನ್ಸ್ ಟಾಪ್ ಹಾಕಿ ಟ್ರೆಂಡಿ ಜುಮ್ಕಾಗಳನ್ನು ಹಾಕುತ್ತಾರೆ. ಅಷ್ಟರ ಮಟ್ಟಿಗೆ ಜುಮ್ಕಾ ತನ್ನ ಬೇಡಿಕೆ ಹೆಚ್ಚಿಸಿಕೊಂಡಿದೆ.

21ನೇ ಶತಮಾನದಲ್ಲಿ ಬೆಳ್ಳಿಯ ಆಭರಣಗಳು ಅತೀ ಹೆಚ್ಚು ಬೇಡಿಕೆ ಗಳಿಸಿದವು. ಸುಲಭವಾಗಿ ಸಿಗುವುದರ ಜತೆಗೆ ಬೆಲೆಯೂ ಕಡಿಮೆ ಇರುವುದರಿಂದ ಈ ಸಿಲ್ವರ್ ಆಭರಣಗಳಿಗೆ ಈಗ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತಿದೆ. ಅದೂ ಅಲ್ಲದೇ, ಜ್ಯೋತಿಷ್ಯದ ಪ್ರಕಾರ ಮಾನಸಿಕ ಶಾಂತಿ ಹಾಗೂ ಭಾವನೆಗಳನ್ನು ನಿಯಂತ್ರಿಸುವಲ್ಲಿ ಈ ಬೆಳ್ಳಿಯ ಆಭರಣಗಳು ಹೆಚ್ಚಿನ ಪಾತ್ರವಹಿಸುತ್ತದೆಯಂತೆ. ಉಂಗುರ ಸರ, ನೆಕ್ಲೇಸ್ ಇವೆಲ್ಲವುಗಳಿದ್ದರೂ ಮಹಿಳೆಯರ ಅಚ್ಚುಮೆಚ್ಚೆಂದರೆ ಜುಮ್ಕಾ. ಅದರಲ್ಲೂ ಆಂಟಿಕ್ ಜುಮ್ಕಾಗಳೆಂದರೆ ಎಲ್ಲಿಲ್ಲದ ಬೇಡಿಕೆ. ಮೇಲ್ನೋಟಕ್ಕೆ ಹಳೆಯದಂತೆ ಕಾಣುವ ಈ ಜುಮ್ಕಾಗಳು ಸಾಂಪ್ರದಾಯಿಕ ಉಡುಗೆ ತೊಟ್ಟಾಗ ವ್ಯಕ್ತಿತ್ವವನ್ನೇ ಬದಲಾಯಿಸಿ ಬಿಡುವಷ್ಟು ಕಳೆಗಟ್ಟಿಸುತ್ತದೆ.

ಈ ಸಿಲ್ವರ್ ಇಯರ್ ರಿಂಗ್ಸ್ ಮಧ್ಯೆ ಪುಟಾಣಿ ಕನ್ನಡಿಯಿರುವುದು ಮತ್ತೊಂದು ಆಧುನಿಕ ವಿನ್ಯಾಸ. ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಮಿರರ್ ಇಯರ್ ರಿಂಗ್ಸ್‌ಗಳಲ್ಲಿ ರೌಂಡ್, ಓವಲ್, ಟ್ರಯಾಂಗಲ್, ಸ್ಕ್ವೇರ್ ಆಕಾರಗಳಿವೆ. ಆರ್ಟಿಫೀಶಿಯಲ್ ಸಿಲ್ವರ್, ಗೋಲ್ಡ್ ಕವರ್ಡ್, ಡಬಲ್ ಸೈಡ್ ಮಿರರ್, ವಿವಿಧ ಬಣ್ಣಗಳ ದಾರ ಉಪಯೋಗಿಸಿ ತಯಾರಿಸಿದ ಥ್ರೆಡ್ ಇಯರ್ ರಿಂಗ್ ಮತ್ತಿತರ ವಿಧಗಳಿವೆ. ದೊಡ್ಡ ಗಾತ್ರದ ಕಿವಿಯೋಲೆಗಳನ್ನು ಧರಿಸಿದ ಬಳಿಕ ಕುತ್ತಿಗೆ ಏನನ್ನೂ ಹಾಕದೆ ಬೋಳಾಗಿ ಬಿಟ್ಟು ಬಿಡುವುದು ಕೂಡಾ ಈ ಫ್ಯಾಷನ್ ಪಟ್ಟಿಯಲ್ಲಿ ಸೇರಿಕೊಂಡಿದೆ.



ಸಾಂಪ್ರದಾಯಿಕ ಉಡುಗೆಗಳಿಗೆ ಹೆಚ್ಚು ಹೊಂದಿಕೊಳ್ಳುವ ಮಿರರ್ ಇಯರಿಂಗ್ಸ್ ಡಿಸೈನರ್ ಸಲ್ವಾರ್, ಗಾಗ್ರಾ, ಕುರ್ತಾ, ಲೆಹೆಂಗಾಗಳಿಗೆ ಸೊಗಸಾಗಿ ಕಾಣುತ್ತದೆ. ರಿಸೆಪ್ಷನ್‌ಗಳಿಗೆ ಉಡುವ ರೇಷ್ಮೆ ಸೀರೆ ಅಥವಾ ಫ್ಯಾನ್ಸಿ ಸೀರೆಗಳಿಗೂ ಇದು ಹೊಂದಿಕೊಳ್ಳುತ್ತದೆ. ಇದರೊಂದಿಗೆ ಮಿರರ್ ನೆಕ್ಲೇಸ್, ಬ್ಯಾಂಗಲ್ಸ್ ಧರಿಸಿದರೆ ರಿಚ್‌ನೆಸ್ ಎದ್ದು ಕಾಣುವುದರಲ್ಲಿ ಸಂಶಯವೇ ಇಲ್ಲ. ಆದರೆ ಧರಿಸುವ ವೇಳೆ ಕೈಜಾರಿ ಬಿದ್ದರೆ ಒಡೆದು ಚೂರಾಗುವ ಸಾಧ್ಯತೆ ಹೆಚ್ಚಿರುವುದರಿಂದ ಸಾಧ್ಯವಾದಷ್ಟು ಕುಳಿತು ಧರಿಸುವುದೇ ಉತ್ತಮ. ಬಳಸಿದ ಬಳಿಕ ತೆಗೆದಿಡುವಾಗಲೂ ಅಷ್ಟೇ. ಶುಭ್ರವಸ್ತ್ರದಿಂದ ಒರೆಸಿ ಒಣಬಟ್ಟೆಯಲ್ಲಿ ಮಡಿಸಿಟ್ಟರೆ ಕನ್ನಡಿಗೆ ಸ್ಕ್ರಾಚ್ ಬೀಳುವುದಿಲ್ಲ.

### ನವೀನ ವಿನ್ಯಾಸ

ವಿನ್ಯಾಸಕರ ಕೈಲಿ ಹೊಸ ರೂಪ ಪಡೆದ ಜುಮ್ಕಾಗಳು ನಾನಾ ಬಣ್ಣ ಹಾಗೂ ಬಗೆ ಬಗೆಯ ವಿನ್ಯಾಸಗಳಲ್ಲಿ ಮೂಡಿ ಬರುತ್ತಿದ್ದು ಫ್ಯಾಷನ್ ಪ್ರಿಯರನ್ನು ಆಕರ್ಷಿಸುತ್ತಿವೆ. ಹೆಚ್ಚು ಚಾಲ್ತಿಯಲ್ಲಿರುವ ಕೃತಕ ಆಭರಣಗಳ ಪಟ್ಟಿಯಲ್ಲಿ ಇದು ಸದ್ಯಕ್ಕೆ ಮೊದಲ ಸಾಲಿನಲ್ಲಿದೆ. ರಾಜಸ್ಥಾನದ ಮೀನಾಕರಿ ಜುಮ್ಕಾಗಳು ಹೆಚ್ಚು ಪ್ರಸಿದ್ಧಿಯಲ್ಲಿವೆ. ಸಾಂಪ್ರದಾಯಿಕ ಉಡುಪಿಗೆ ಹೇಳಿಮಾಡಿಸಿದ ಆಭರಣವಿದು. ಬೆಲ್, ಹೂಪ್, ಕುಂದನ್, ಆ್ಯಂಟಿಕ್ ವಿನ್ಯಾಸದ ಡ್ಯಾಂಗ್ಲರ್, ಪೊಲ್ಕಿ, ಪಂಜಾಬಿ ಶೈಲಿಯ ಜುಮ್ಕಾಗಳು ಇಂದು ಹೆಚ್ಚು ಬೇಡಿಕೆಯಲ್ಲಿವೆ. ಸಾಂಪ್ರದಾಯಿಕ ಉಡುಗೆಗೆ ಹೇಳಿಮಾಡಿಸಿದ್ದು. ಅದರಲ್ಲೂ ಸಿಲ್ವರ್ ಕಲರ್ ಜುಮ್ಕಾ ತೊಟ್ಟುಕೊಳ್ಳುವಾಗ ಲಂಗ ಬ್ಲೌಸ್, ಕಂಟೆಂಪರರಿ ಪಲಾಜೊ, ಲಾಂಗ್ ಕುರ್ತಿ ಉಡುಗೆಗಳಿದ್ದರೆ ಚೆಂದವಾಗಿ ಕಾಣುತ್ತಾರೆ.

## ಜುಮ್ಕಾ ಹಾಳಾಗದಂತೆ ಹೀಗೆ ಮಾಡಿ...

- ಸ್ಪ್ರೆ, ಅತ್ತರು ಜುಮ್ಕಾಕ್ಕೆ ತಾಗದಂತೆ ಜಾಗೃತೆ ವಹಿಸಿ.
- ಉಪಯೋಗಿಸಿದ ನಂತರ ಮೃದುವಾದ ಹತ್ತಿ ಬಟ್ಟೆಯಿಂದ ಸಿಲ್ವರ್ ಜುಮ್ಕಾಗಳನ್ನು ಒರೆಸಿ ಇಡಿ.
- ರಾತ್ರಿ ವೇಳೆ ಜುಮ್ಕಾಗಳನ್ನು ಧರಿಸಿ ಮಲಗಬೇಡಿ. ಅವು ಹಾಳಾಗಬಹುದು ಜೊತೆಗೆ ಚರ್ಮಕ್ಕೆ ಚುಚ್ಚಿ ಗಾಯವಾಗುವ ಸಾಧ್ಯತೆ ಇರುತ್ತದೆ.
- ಬಿಸಿನೀರು ತಾಕದಂತೆ ಸಾಧ್ಯವಾದಷ್ಟು ಎಚ್ಚರವಹಿಸಿ. ಇದರಿಂದ ಬಣ್ಣ ಕಳೆಗುಂದುವ ಸಾಧ್ಯತೆ ಇರುತ್ತದೆ.
- ರೇಷ್ಮೆ ಸೀರೆ ಧರಿಸಿದಾಗ ದೊಡ್ಡದಾದ ಜುಮ್ಕಾ ಧರಿಸಿ.
- ಸಿಲ್ವರ್ ಜುಮ್ಕಾ ಸೀರೆ, ಗಾಗ್ರ, ಲಂಗ ದಾವಣಿಗಳ ಜತೆ ಧರಿಸಿದರೆ ನೋಡಲು ಟ್ರಡಿಷನಲ್ ಲುಕ್ ನೀಡುತ್ತದೆ.
- ಮೀಡಿಯಂ ಗಾತ್ರದಲ್ಲಿರುವ ಜುಮ್ಕಾಗಳು ಕ್ಯಾಶುವಲ್, ಚೂಡಿದಾರ್ ಎಲ್ಲದಕ್ಕೂ ಸೆಟ್ ಆಗುತ್ತದೆ.
- ಜುಮ್ಕಾ ಧರಿಸಿದಾಗ ರೇಷ್ಮೆ ಸೀರೆ ಉಟ್ಟು ಡಾಬು, ಬೈತಲೆ ಬೊಟ್ಟು ಧರಿಸಿದರೆ ಮತ್ತಷ್ಟು ಕಳಕಳೆಯಾಗಿ ಕಾಣಬಹುದು.
- ಜುಮ್ಕಾ ಧರಿಸಿದಾಗ ಕೂದಲನ್ನು ಹರವಿ ಬಿಟ್ಟುಕೊಳ್ಳಬೇಡಿ. ಇದರಿಂದ ಕೂದಲಿಗೆ ಜುಮ್ಕಾ ಸಿಕ್ಕಿ ತೊಂದರೆಯಾಗುತ್ತದೆ.

## ಜುಮ್ಕಾ ಸ್ಟೇಟ್‌ಮೆಂಟ್ ಪೀಸ್

ಚಿನ್ನಕ್ಕೆ ಹೋಲಿಸಿದರೆ ಸಿಲ್ವರ್ ಜುಮ್ಕಾಕ್ಕೆ ಈಗ ಬೇಡಿಕೆ ಹೆಚ್ಚು. 800 ರಿಂದ 3000 ರೂಪಾಯಿ ಒಳಗೆ ಒಂದು ಜತೆ ಚೆಂದದ ಸಿಲ್ವರ್ ಜುಮ್ಕಾ ತೆಗೆದುಕೊಳ್ಳಬಹುದು. ಬೆಲೆಯೂ ದುಬಾರಿಯಲ್ಲದ ಕಾರಣ ಇದಕ್ಕೆ ಬೇಡಿಕೆಯೂ ಹೆಚ್ಚು. ಈಗಿನ ಮಿಲೆನಿಯನ್ಸ್, ಯುವಜನಾಂಗಕ್ಕೆ ವೈಟ್ ಮೆಟಲ್ ಕೂಡ ಒಂದು ಫ್ಯಾಷನಬಲ್ ಮೆಟಲ್ ಎಂದು ಗೊತ್ತಾಗಿದೆ. ಸ್ಟರಲಿಕ್ಸ್ ಸಿಲ್ವರ್ ಜ್ಯುವೆಲ್ಲರಿ ಹೊರದೇಶಗಳಲ್ಲಿ ತುಂಬಾ ಜನಪ್ರಿಯ.

ಜುಮ್ಕಾ ಮತ್ತು ಚಾಂದ್ ಬಾಲಿ ಈಗ ಹೆಚ್ಚು ಟ್ರೆಂಡ್‌ನಲ್ಲಿದೆ. ಚಾಂದ್ ಬಾಲಿ ಜುಮ್ಕಾದ ಹಾಗೇ ಇರುತ್ತದೆ. ಸಾಂಪ್ರದಾಯಿಕ ಉಡುಗೆಗೆ ಇದು ಹೇಳಿ ಮಾಡಿಸಿದ್ದು. ಈಗ ಮಿಕ್ಸ್ ಆಂಡ್ ಮ್ಯಾಚ್ ಮಾಡುವ ಟ್ರೆಂಡ್ ಇದೆ. ಈಗಿನವರು ಸಾಂಪ್ರದಾಯಿಕ ಉಡುಗೆಯ ಜತೆಗೆ ವೆಸ್ಟರ್ನ್ ಉಡುಗೆ ತೊಟ್ಟಾಗಲೂ ಟ್ರೆಂಡಿಯಾಗಿರುವ ಜುಮ್ಕಾ ಹಾಕುತ್ತಾರೆ. ಜುಮ್ಕಾ ಒಂದು ಸ್ಟೇಟ್‌ಮೆಂಟ್ ಪೀಸ್ ಎನ್ನಬಹುದು. ಕೆಲವೊಮ್ಮೆ ಬೇರೆ ಯಾವುದೇ ಆಭರಣ ಹಾಕದೇ ಕೇವಲ ಜುಮ್ಕಾ ಒಂದೇ ಹಾಕುತ್ತಾರೆ.

ಪ್ರತಾಪ್ ಕಾಮತ್
ಆಭರಣ ಜ್ಯುವೆಲರಿಯ ವ್ಯವಸ್ಥಾಪಕ ನಿರ್ದೇಶಕ